# ಸಾಮ್ಯ ಮತ್ತು ಶೂನ್ಯಗಳ ನಡುವೆ ದೇವನೂರು ಭಾಷೆಯ ಅನಾವರಣ



**ಶ್ರೀನಿವಾಸ ಶೆಟ್ಟಿ**

ಕಲೆ: ಮುರಳೀಧರ್ ರಾಥೋಡ್

ಸಾಹಿತ್ಯ ಓದಿ ಆರಕ್ಷಕ ಆಗೋದ್ಯಲ್ಲ, ಆ ಹತ್ತಲಾರದ ಅಥವಾ ಇಳಿಯಲಾರದ ಅಂತರ ಬಲ್ಲವರಿಗೂ ಹಾಗೂ ಬದುಕಿದವರಿಗಷ್ಟೇ ಗೊತ್ತು. ಭಾವನಾ ಪ್ರಪಂಚದಿಂದ ಬದುಕಿನ ವಾಸ್ತವಕ್ಕೆ ಬಂದಾಗ ಎಲ್ಲಿಯ ರೂಪಕಗಳು, ಎಲ್ಲಿಯ ಕೂಪಗಳು, ಉಭಯಸಂಕಟಗಳ ನಡುವೆ ನಲುಗುವ ಮನಸ್ಸು ಸಾಹಿತ್ಯ-ಸಾಹಿತಿಗಳ ಸಹವಾಸಕ್ಕೆ ಹೆಚ್ಚು ಹಾತೊರೆಯುತ್ತಿತ್ತು. ಆದರೆ ಬಯಕೆಗಳೆಲ್ಲವೂ ಗೌಪ್ಯವಾಗಿಯೇ ಉಳಿದು ಗುಂಡಿ ತೋಡಿಕೊಂಡಿದ್ದವು.

ಸಾಹಿತಿಗಳಿಗೆ ಜೀವ ಬೆದರಿಕೆಯೊಡ್ಡುವ, ಮನಸ್ಸನ್ನೇ ಆವರಿಸಿದ ದೇಹದ ರಕ್ತ ಹರಿಸುವ ಬೆಳವಣಿಗೆ ಯಾವಾಗಿನಿಂದಾದ್ದೋ ತಿಳಿಯದು. ಆದರೆ, ಸಾಹಿತಿಗಳನ್ನು ರಕ್ಷಿಸಲು ಮುಂದಾಗುವುದನ್ನು ನೋಡಿದರೆ ಈ ಸಮಾಜಕ್ಕೆ ಔಷಧಿ ಅವರ ಬಳಿ ಇದೆ ಅನ್ನುವುದು ಮಾತ್ರ ಬಲ್ಲೆ.

ಇಂಥ ಸನ್ನಿವೇಶದಲ್ಲಿ ದೇವನೂರು ಮಹಾದೇವ ಸರ್ ಅವರನ್ನು ರಕ್ಷಿಸುವ ದೌರ್ಭಾಗ್ಯವೊಂದು ರಕ್ಷಣೆಯ ಹೊಣೆಹೊತ್ತ ಸೌಭಾಗ್ಯದಲ್ಲಿ ನನ್ನ ಬಳಿ ಬಂತು. ನನ್ನ ಆಸೆಯನ್ನು ನನ್ನ ವೃತ್ತಿ ಪೂರೈಸಿದ್ದಕ್ಕೆ ಮೊದಲ ಬಾರಿ ಮನಃಪೂರ್ವಕ ಆನಂದಿಸಿದೆ, ಅಪಾಯದ ಇಟ್ಟಿಗೆಮೇಲೆ.

ಶುರುವಿನಲ್ಲಿ ದೇಮ ಅವರನ್ನ ರಕ್ಷಣಾರಂಗಕ್ಕೆ ಒಪ್ಪಿಸಲು ಆಗಲೇ ಇಲ್ಲ. ಮೊದಲಿಗೆ ಪೊಲೀಸರೆಂದರೆ ಅವರಿಗೆ ಇಷ್ಟವೇ ಇಲ್ಲ. ಕೆಲವು ಸಲ ಸಾರ್ವಜನಿಕ ಸ್ಥಳದಲ್ಲೇ ನಮ್ಮನ್ನೇ ಅನುಮಾನಿಸುವಂತೆ ದೂರ ನಿಲ್ಲಿಸಿದ್ದೂ ಉಂಟು. ಕಾಲಕ್ರಮೇಣ ನಾನು ಸಾಹಿತ್ಯ ವಿದ್ಯಾರ್ಥಿ ಎಂದೂ, ಇವ ಅಂಥ ಅನುಮಾನಸ್ಥನಲ್ಲವೆಂದೂ ಅವರ ಸಾಮೀಪ್ಯ ನನಗೆ ದೊರಕಿತು.

ಸುಮಿತ್ರಾ ಮೇಡಂ, 'ಸದ್ಯ, ನೀವು ಕನ್ನಡ ಎಂ.ಎ ಮಾಡಿ ನನ್ನ ಅರ್ಧ ಕೆಲಸ ಇಳಿಸಿದ್ದೀರಾ ಶ್ರೀನಿವಾಸ್. ಯಾವುದು ಮಹಾಪ್ರಾಣ, ಯಾವುದು ಅಲ್ಪಪ್ರಾಣ, ಯಾವುದಕ್ಕೆ ಹೊಕ್ಕಳ ಸೀಳಬೇಕು, ಎಲ್ಲವನ್ನೂ ಹೇಳಿ ಹೇಳಿ ಸಾಕಾಗಿತ್ತು. ಇನ್ನ ನೀವುಂಟು ಇವ್ರುಂಟು' ಅನ್ನೋ ಮಾತಿನಲ್ಲಿ ಮೊದಲ ಜವಾಬ್ದಾರಿ ಸಿಕ್ಕಿತು – ದೇಮ ಅವರಿಗೆ ಕನ್ನಡ ಕಾಗುಣಿತ ಸ್ವರ ವ್ಯಂಜನ ನೆನಪಿಸುವ ಹೊಣೆ.

'ರೀ, ಒಮ್ಮೆ ನಾನು ಸಿಐಎಲ್‌ಗೆ ಇಂಟರ್‌ವ್ಯೂಗೆ ಹೋಗಿದ್ದೆ. ಅಲ್ಲಿ ಓವೆಲ್ಸ್ ಬಗ್ಗೆ ಕೇಳಿದ್ರು. ನಂಗ್ ಹೇಳಕ್ ಬರ್ಲಿಲ್ಲ. ಅದು ಹೊರಗೆ ಗೊತ್ತಾಗಿ – ಪಿ. ಲಂಕೇಶ್ ಹತ್ರ ಯಾರೋ 'ಮಾದೇವಂಗೆ ಓವೆಲ್ಸ್ ಬರಲ್ವಂತೆ' ಅಂತ ಹೇಳಿದ್ರಂತೆ. ಅದಕ್ಕೆ ಅವ್ರು 'ಹೂ, ನಿಮ್ಗ್ ಅದೊಂದೇ ಬರೋದು' ಅಂತ ಅಂದ್ರಂತೆ.'

'ನಾನ್ ಕಲ್ತಿದ್ದೆಲ್ಲ ಹೊರಗೆ ಕಣ್ರಿ. ಕ್ಯಾಂಟೀನ್‌ಲಿ ಚಳುವಳಿ ಹೋರಾಟ ಅಂತ ಕ್ಲಾಸ್ಗೆ ಹೋಗ್ತಿರ್ಲಿಲ್ಲ. ಆದ್ರೆ ಒಳ್ಳೇ ಮೇಸ್ಟ್ರುಗಳು ಸಿಕ್ಕಿದ್ರು. ನಾನ್ ಕ್ಲಾಸ್ಗೆ ಹೋದ್ರೆ ನನ್ನನ್ನೇ ಪ್ರೊಫೆಸರ್ ಅಂದ್ಕಂಡು ಪಾಠ ಮಾಡೋರೋ. ಪರೀಕ್ಷೆ ಸಮಯದಲ್ಲಿ ಎಲ್. ಬಸವರಾಜು ಸರ್ ಹೆಲ್ಪ್ ಮಾಡಿದ್ರು. ಎಲ್ಲಿ ಫೇಲ್ ಆಗ್ಬಿಟ್ಟಾನು ಅಂತ ಪರೀಕ್ಷೆಗೆ ಏನೇನ್ ಬರುತ್ತೆ ಅನ್ನೋದನ್ನ ನೇರವಾಗಿ ಹೇಳ್ದೇನೆ,